ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ.

ಪಂಚಾಯತ್ ರಾಜ್ ವ್ಯವಸ್ಥೆ ಮೂಲಕ ಸಬಲೀಕರಣ: ಸ್ತ್ರೀವಾದಿ ಅಧ್ಯಯನ.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಮಹಿಳಾ ಅಧ್ಯಯನ

ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಸಾದರ ಪಡಿಸುತ್ತೀರುವ ಸಾರಲೇಖ.

ಮಾರ್ಗದರ್ಶಕರು

ಡಾ.ಲಕ್ಷ್ಮೀದೇವಿ.ವಾಯ್.

ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ ವಿಭಾಗ,

ಸಂಶೋಧನಾ ಮತ್ತು ವಿಸ್ತರಣಾಕೇಂದ್ರ ವಿಜಯಪುರ.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ

ಸಂಶೋಧನಾ ವಿದ್ಯಾರ್ಥಿನಿ

ಸಾವಿತ್ರಿ ಕೊಪ್ಪಳ

ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ ವಿಭಾಗ,

ಸಂಶೋಧನಾ ಮತ್ತು ವಿಸ್ತರಣಾಕೇಂದ್ರ ವಿಜಯಪುರ.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ.

2017–18

ಪಂಚಾಯತ್ ರಾಜ್ ವ್ಯವಸ್ಥೆ ಮೂಲಕ ಸಬಲೀಕರಣ; ಸ್ತ್ರೀವಾದಿ ಅಧ್ಯಯನ

ಪ್ರಸ್ತಾವನೆ ;

ಮಹಿಳಾ ಸಬಲೀಕರಣಎನ್ನುವುದು 90ರ ದಶಕದಘೋಷವಾಕ್ಯವಾಗಿದೆ. ರಾಜಕೀಯಕ್ಷೇತ್ರವು ಈ ಅಧಿಕಾರದ ಸಂಧಾನ ನಡೆಸುವತಾಣವಾಗಿದೆ.ಸಬಲೀಕರಣ ಸಾಧಿಸುವುದುಎಂದರೇ ಸಾರ್ವಜನಿಕಜಗತ್ತಿನಲ್ಲಿರಾಜಕೀಯ ಸಂಸ್ಥೆಗಳೊಳಗೆ ಅಧಿಕಾರದ ಮೂಲಕ ವ್ಯವಹರಿಸುವುದು ಮತ್ತು ಭಾಗವಹಿಸುವುದುಆಗಿದೆ. ಸಬಲೀಕರಣ ಎಂಬ ಪದವುಆಂಗ್ಲ ಭಾಷೆಯ"ಎಂಪವರಮೆಂಟ್ "ಎಂಬ ಪದದಿಂದ ಬಂದಿದೆ. ಎಂಪವರಮೆಂಟ್ಎಂದರೆ ಶಕ್ತಿಕೊಡು, "ಅಧಿಕಾರ ವಹಿಸು" ಸಮರ್ಥಮಾಡು"ಎಂದರ್ಥವಾಗುತ್ತದೆ. ಶ್ರೀಲತಾ ಬಾಟ್ಲವಾಲಾಅವರು ಸಬಲೀಕರಣವನ್ನು ಹೀಗೆ ಹೇಳಿದ್ದಾರೆ "ಈಗಿರುವಅಧಿಕಾರ ಸಂಬಂಧಗಳನ್ನು ಹೋಗಲಾಡಿಸಿ ಅಧಿಕಾರ ಮತ್ತು ಸಂಪನ್ಮೂಲಗಳ ಮೇಲೆ ಹಿಡಿತ ಹೊಂದುವ ಪ್ರಕ್ರಿಯೆಯೇ ಸಬಲೀಕರಣ". ಸ್ತ್ರೀವಾದಿಚಿಂತಕರು ಸಬಲೀಕರಣವನ್ನು ಹೀಗೆ ಹೇಳಿದ್ದಾರೆ "ಮಹಿಳೆಯರ ಪರಾಧೀನ ಪರಿಸ್ಥಿತಿಗೆ ಕಾರಣವಾಗಿರುವ ಪ್ರಸ್ತುತ ಸಾಮಾಜೀಕರಚನೆಯಲ್ಲಿತೀವ್ರವಾದ ಬದಲಾವಣೆತರುವುದೇ ಸಬಲೀಕರಣ".

ಮೂದಲು ಪಂಚಾಯಿತಿಎಂದರೇಊರಿನಐವರು ಮುಖಂಡರು ಅರಳಿ ಕಟ್ಟೆಯ ಮೇಲೆ ಕುಳೀತು ನೆರೆದಗ್ರಾಮಸ್ಥರ ಸಮ್ಮುಖದಲ್ಲಿ ನ್ಯಾಯ ಹೇಳುವುದನ್ನು ಪಂಚಾಯಿತಿತಿರ್ಮಾನಎಂದು ಹೇಳಲಾಗುತ್ತಿತ್ತು. ಹಿಂದೆಯಿದ್ದ ಪಂಚಾಯಿತಿ ಎಂಬ ಬಳಕೆಯ ಪದದಲ್ಲಿಎಂದು ಹೆಣ್ಣು ಪಂಚಾಯಿತಿಕಟ್ಟೆಯೇರಿ ಕುಳಿತವಳಲ್ಲ. ಆದರೂಯಾವಾಗಲೂ ನ್ಯಾಯ ಕೇಳಲು ನಿಂತವಳೇ. ಈ ದೃಶ್ಯಕ್ಕೆ ಭಿನ್ನವಾಗಿ ಶಾಸನಬದ್ದರೂಪ ಪಡೆದ ಪಂಚಾಯತ್ರಾಜ್ ವ್ಯವಸ್ಥೆ ಬಂದಾಗ ಮಹಿಳೆಯೂ ಅದರಲ್ಲಿಅಧಿಕಾರದ ಪಾಲುದಾರಳಾದಳು.ಅದೊಂದು ಈಗ ವಾಸ್ತವ ಸಂಗತಿಯಾಗಿ ನಮ್ಮ ಮುಂದಿದೆ. ಸ್ವತಂತ್ರ ನಂತರದ ದಿನಗಳಲ್ಲಿ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಸರಕಾರ ಹಾಕಿಕೊಂಡ ಕಾರ್ಯಕ್ರಮಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯಅಗತ್ಯತೆಯನ್ನುಕಂಡುಕೊಂಡ ಸರಕಾರಇದರ ಪರಿಣಾಮವಾಗಿದೇಶದಲ್ಲಿಗ್ರಾಮೀಣ ಪಂಚಾಯಿತಿಯಲ್ಲಿ ಮಹಿಳೆಯರನ್ನು ಪಾಲುದಾರಳಾಗಿ ನೋಡುವಂತಾಯಿತು. ಉದಾ:681258ಜನ ಮಹಿಳೆಯರು,ತಾಲ್ಲೂಕ ಪಂಚಾಯಿತಿಗೆ 37109ಜನ ಮಹಿಳೆಯರು,ಜಿಲ್ಲಾ ಪಂಚಾಯಿತಿಗೆ3153 ಜನ ಮಹಿಳೆಯರು ಆಯ್ಕೆಯಾಗಿದ್ದಾರೆ. ಭಾರತದೇಶದಲ್ಲಿನ ಮಹಿಳೆಯರು ಬಡತನ, ಆಧೀನತೆ, ಅವರ ಸಾಮಾಜಿಕಅಭದ್ರತೆಅವರ ಮೇಲಿನ ದೌರ್ಜನ್ಯ– ಇವುಗಳ ನಿರ್ಮೂಲನಕ್ಕೆ ಮಹಿಳೆಯರು ಆರ್ಥಿಕ ಮತ್ತುರಾಜಕೀಯಅಧಿಕಾರಿಕರಣ ಪ್ರಕ್ರಿಯೆಯಲ್ಲಿ ಒಳಗಾಗಬೇಕು ಎಂದುಯೂನಿಫೆಮ್ಅಭಿಪ್ರಾಯ ಪಡುತ್ತದೆ.ಮಹಿಳೆಯರ ಸ್ವಾವಲಂಬನೆಯು ಲಿಂಗ ಸಮಾನತೆಗೆಅಗತ್ಯವಾಗಿ ಬೇಕಾದಅಂಶವಾಗಿದೆ.

ಭಾರತದ ಸಮಾಜದ ಬಹುಸಂಖ್ಯಾತಅನಕ್ಷರಸ್ಥ, ಕೆಳಸ್ತರದ,ಕೆಳಜಾತಿಯ ಮಹಿಳೆಯರಿಗೆ ಸಾರ್ವಜನಿಕವಾಗಿರಾಜಕೀಯಅಧಿಕಾರ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶಗಳು ದಕ್ಕಿದವುಎನ್ನುವುದು

ಸಂತೋಷದ ವಿಷಯವೇನೋ ಸರಿ. ಆದರೆ ಈ ಚುನಾಯಿತ ಮಹಿಳೆಯರು ಬದುಕುತ್ತಿರುವ ಸಮಾಜದಲ್ಲಿಅವರಿಗೆಯೋಚಿಸುವ ಸ್ವಾತಂತ್ರ್ಯ, ಸಾಮರ್ಥ್ಯಅರ್ಥ ಮಾಡಿಕೊಳ್ಳಲು, ಬೆಳೆವಣಿಗೆ, ಮನೆಯ ನಾಲ್ಕು ಗೋಡೆಯೊಳಗಿನ ಜವಾಬ್ದಾರಿಯ ಹೊರೆಯನ್ನು ಹಗುರಗೊಳಿಸಿಕೊಂಡು ಹೊರಗಿನಜವಾಬ್ದಾರಿಯನ್ನು ಹೊರಲು ಬೇಕಾದ ಸಮಯ ಮತ್ತು ಸಾಮರ್ಥ್ಯವನ್ನು ಕಲ್ಪಿಸಿಕೊಡುವ ಸನ್ನಿವೇಶದಕೊರತೆಯಿಂದಾಗಿ ಅವಳನ್ನು ಅಂಚಿಗೆತಂದು ನಿಲ್ಲಿಸಿದೆ.

ಪಂಚಾಯಿತಿಯಲ್ಲಿ ಬರುವಂತಹ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬರುವ ಹಣದ ಪೂರೈಕೆ ಮಹಿಳಾ ಪ್ರತಿನಿಧಿಕರಣವುಳ್ಳ ಬಹುಮುಖ್ಯಆರ್ಥಿಕ ಕಾರ್ಯಕ್ರಮಗಳೆಂದರೇ ಸ್ತ್ರೀ ಶಕ್ತಿ ಸಂಘಗಳು, ಉಜ್ವಲ ಯೋಜನೆ, ಭಾಗ್ಯಲಕ್ಷ್ಮೀಯೋಜನೆ,ಜನಧನಯೋಜನೆ,ಮಹಾತ್ಮಗಾಂಧೀಜಿಉದ್ಯೋಗಖಾತ್ರಿಯೋಜನೆ, ವಸತಿ ಯೋಜನೆಗಳು ಮುಂತಾದ ಯೋಜನೆಗಳ ಮುಖಾಂತರ ಮಹಿಳಾ ಸಬಲೀಕರಣ ಹೊಂದಲು ಪ್ರಯತ್ನಿಸಲಾಗುತ್ತಿದೆ.

ಭಾರತದೇಶವು ಪಂಚಾಯತ್‌ರಾಜ್ ವ್ಯವಸ್ಥೆಯ ಬಗ್ಗೆ ಸುಧೀರ್ಘವಾದಇತಿಹಾಸವನ್ನು ಹೊಂದಿದೆ.ಗ್ರಾಮೀಣಅಭಿವೃದ್ಧಿಯಲ್ಲಿ ಪಂಚಾಯಿತಿಗಳು ಪ್ರಮುಖ ಪಾತ್ರ ವಹಿಸುತ್ತದೆ.ಗ್ರಾಮೀಣ ಮಹಿಳೆಯರನ್ನು ಸಬಲಗೊಳಿಸಲು ಸೂಕ್ತವಾದ ವ್ಯವಸ್ಥೆಯಾಗಿದೆ.ಪಂಚಾಯತ್‌ರಾಜ್ ವ್ಯವಸ್ಥೆಯು ಕೆಳಸ್ತರದಿಂದ ಮೇಲಸ್ತರದವರೆಗಿನ ಸರಕಾರವಾಗಿರುವುದರಿಂದ ಮಹಿಳೆಯರ ಕೆಲಸಕ್ಕೆ ಸಮರ್ಥವಾದ ಮತ್ತು ಸ್ವಚ್ಛಕಲ್ಪನೆ ಮತ್ತುಚಟುವಟಿಕೆಯುಕ್ತವಾದಒಂದು ಸೂಕ್ತ ಸರಕಾರವಾಗಿದೆ. **ಪಂಚಾಯತ್‌ರಾಜ್ ವ್ಯವಸ್ಥೆಯಇತಿಹಾಸ:**

ಭಾರತದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯು ವೇದಗಳ ಕಾಲದ ನಾಗರಿಕತೆಯಷ್ಟೇ ಹಳೆಯದು ಎಂದು ತಿಳಿದು ಬರುತ್ತದೆ. ವೇದಗಳಲ್ಲಿ ಮೊದಲ ವೇದವಾದಋಗ್ವೇದ ಕಾಲದಿಂದಲೂಕೂಡಾ ಭಾರತದಲ್ಲಿ ಸ್ವಯಂ ಆಡಳಿತ ಪದ್ದತಿಜಾರಿಯಲ್ಲಿತ್ತು. ಅಂದಿನ ಸ್ವಯಂ ಸರಕಾರಗಳನ್ನು ಸಭಾ–ಸಮಿತಿಗಳೆಂದು ಕರೆಯುತ್ತಿದ್ದರು. ವೇದಗಳ ಕಾಲದಲ್ಲಿಗ್ರಾಮದ ಮುಖಂಡರನ್ನು"ಗ್ರಾಮೀಣಿ" ಎಂಬ ಪದದಿಂದಕರೆಯುತ್ತಿದ್ದರು.ಜೆ.ಜೆ.ರಸೋಅವರು ಪಂಚಾಯಿತಿಯನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ. "ಒಂದುರಾಷ್ಟ್ರದಲ್ಲಿ ಪ್ರಜಾಪ್ರಭುತ್ವದ ಯಶಸ್ವಿಯಾಗ ಬೇಕಾದಲ್ಲಿಅದುಉತ್ತಮ ಸ್ಥಳೀಯ ಸರಕಾರ ವ್ಯವಸ್ಥೆಯನ್ನು ಹೊಂದಿರಬೇಕು". ಎರಿಕ್‌ಜಾನ್ಸನ್‌ಅವರು ಪಂಚಾಯಿತಿಅಂದರೆ ಹೀಗೆ ಹೇಳಿದ್ದಾರೆ "ಸ್ಥಳೀಯ ಸಮುದಾಯಗಳಿಗೆ ಸಂಬಂಧಿಸಿದ ವ್ಯವಹಾರವನ್ನು ಸ್ಥಳೀಯ ಸಂಸ್ಥೆಗಳೇ ನಿರ್ವಹಿಸಿದರೆ ಅದೇ ಸ್ಥಳೀಯ ಸರಕಾರ".

ಲಾರ್ಡ್ ಬ್ರೈಸ್‌ಅವರು ಪಂಚಾಯಿತಿಅಂದರೆ ಹೀಗೆ ಹೇಳಿದ್ದಾರೆ "ಸ್ಥಳೀಯ ಸರಕಾರಗಳು ಪ್ರಜಾಪ್ರಭುತ್ವ ಯಶಸ್ವಿಗೆ ತರಬೇತಿ ಶಾಲೆಯಿದಂತೆ"ವೇದಗಳ ನಂತರದಕಾಲಾವಧಿಯಲ್ಲಿ ಈ ಸ್ಥಳೀಯ ಸಂಸ್ಥೆಗಳು ಪಂಚರನ್ನು ಒಳಗೊಂಡ ಪರಿಷತ್‌ಗಳಾದವು. ಪಂಚಾಯಿತಿಎಂಬುದು ಬಹಳ ಹಿಂದಿನಿಂದಲೂ ಬೆಳೆದು ಬಂದಿರುವಒಂದು ಪದ್ಧತಿ. ಬಹಳ ಹಿಂದೆ ಪಂಚರುಎಂಬುವದು ಪಂಚಾಯಿತಿಗಳ ಮುಖ್ಯಸ್ಥರಾಗಿರುತ್ತಿದ್ದರು. ಪಟೇಲ, ಗೌಡ,

ಕುಲಕರ್ಣಿ, ಪೋಲಿಸ್ ಪಾಟೀಲ ಹೀಗೆ ಹಲವು ಹೆಸರುಗಳಲ್ಲಿ ಗುರ್ತಿಸಲಾಗುತಿತ್ತು.ಪಂಚ ಎಂಬ ಈ ಪದವೇ ಪಂಚಾಯಿತಿ ಆಗಿ ನಂತರ ಪಂಚಾಯತ್‌ರಾಜ್ ಆಗಿ ಬದಲಾವಣೆ ಹೊಂದಿತು.

ಪಂಚರ ಪ್ರಮುಖವಾದ ಅಧಿಕಾರಗಳ

1. **ನ್ಯಾಯತಿರ್ಮಾನದಅಧಿಕಾರ:**

ಇದು ಪಂಚಾಯಿತಿಕಟ್ಟೆ ಎಂಬ ವ್ಯವಸ್ಥೆಯಿದ್ದು,ಅಲ್ಲಿ ವಿವಾದಗಳನ್ನು ಬಗೆಹರಿಸಿ, ನ್ಯಾಯತೀರ್ಮಾನಮಾಡುವುದು.

2. **ಭೂಮಿಹಂಚುವ ಅಧಿಕಾರ.**
3. **ಕರ ವಸುಲಿ ಮಾಡುವಅಧಿಕಾರ:** ತೆರಿಗೆ ಸಂಗ್ರಹ ಮಾಡುವಅಧಿಕಾರ ಹೊಂದಿದ್ದರು.

ಪ್ರಾಚೀನಕಾಲದ ಪಂಚಾಯಿತಿಗಳು:

ಸಾಮಾಜಿಕ, ಆರ್ಥಿಕವಾಗಿ ಪ್ರಾಬಲ್ಯವಾಗಿದ್ದವರು ಮಾತ್ರ ವಂಶಪಾರಂಪರ್ಯವಾಗಿ ಪಂಚರಾಗಿಅಧಿಕಾರ ನಡೆಸಲುಅವಕಾಶವಿರುತ್ತಿತ್ತು. ಈ ವ್ಯವಸ್ಥೆಯಲ್ಲಿ ಸಾಮಾಜಿಕ ನ್ಯಾಯದೊರೆಯುತ್ತಿರಲಿಲ್ಲವೆಂಬ ಆಪಾದನೆಇತ್ತು. ಬಲಿಷ್ಠರು, ಶ್ರೀಮಂತರು, ಮೇಲ್ವರ್ಗದವರು ಹೇಳಿದ್ದೆ ನ್ಯಾಯವಾಗಿತ್ತು. ಅವರುಅಭಿಪ್ರಾಯವನ್ನುತೀರ್ಮಾನವನ್ನು ಸಾಮಾನ್ಯಜನರು ಒಪ್ಪಿಕೊಳ್ಳಬೇಕಾಗಿತ್ತು. ಯಾವುದೇರೀತಿಯಲ್ಲೂ ಸಾಮಾನ್ಯಜನರುತಮ್ಮಅಭಿಪ್ರಾಯವನ್ನು ಹೇಳಲು ಅಥವಾತೀರ್ಮಾನವನ್ನು ವಿರೋಧಿಸುವಂತಿರಲಿಲ್ಲ. ರಾಜ ಮಹಾರಾಜರಕಾಲದಲ್ಲಿಯೂಕೂಡಾಇಂತಹ ವ್ಯವಸ್ಥೆಯು ನಮ್ಮ ಹಳ್ಳಿಗಳಲ್ಲಿಯೂ ನಡೆಯುತ್ತಿತ್ತು. ಪಂಚರನ್ನು ಒಳಗೊಂಡ ಪಂಚಾಯಿತಿಯತೀರ್ಮಾನವೇ ಗ್ರಾಮಗಳಲ್ಲಿ ಅಂತಿಮದ್ದಾಗಿತ್ತು. ಪ್ರಸ್ತುತವಾಗಿರುವ ಪಂಚಾಯತ್ ವ್ಯವಸ್ಥೆಯಂತೆಎಲ್ಲಾ ವರ್ಗದವರೂ, ಮಹಿಳೆಯರು ಭಾಗವಹಿಸಲು ಅವಕಾಶವಿರಲಿಲ್ಲ.

ರಾಜವಂಶರಕಾಲದಲ್ಲಿ ಸ್ಥಳೀಯ ಸರಕಾರಗಳು. :

ಭಾರತವನ್ನು ಆಳಿದ ಮೌರ್ಯ ಮತ್ತುಗುಪ್ತರಕಾಲದಲ್ಲಿಕೂಡಾ ಸ್ಥಳೀಯ ಸರಕಾರಗಳು ಅಸ್ತಿತ್ವದಲ್ಲಿದ್ದವು. ಗ್ರೀಕ್‌ರಾಯಭಾರಿ ಮೆಗಾಸ್ಥನೀಸ್‌ನುತನ್ನ“ಇಂಡಿಕಾ” ಗ್ರಂಥದಲ್ಲಿ “ಭಾರತದಲ್ಲಿಗ್ರಾಮ ಪಂಚಾಯತಿಗಳು ಅಸ್ತಿತ್ವದಲ್ಲಿದ್ದವೆಂದು ಹೇಳಿದ್ದಾನೆ. ಅಂದಿನ ಕಾಲದಲ್ಲಿಗ್ರಾಮ ಪಂಚಾಯಿತಿಗಳು ಬೇರು ಮಟ್ಟದ ಆಡಳಿತ ನೀಡುವಕಾರ್ಯ ಮಾಡುತ್ತಿದ್ದವು. ಗ್ರಾಮ ಪಂಚಾಯಿತಿಗಳು ಅತಿ ಹೆಚ್ಚಿನಅಧಿಕಾರವನ್ನು ಹೋದಿದ್ದವು.ಮತ್ತು ಅವು ಕಾರ್ಯಾಗೀಯ ಮತ್ತು ನ್ಯಾಯಾಂಗೀಯ ಅಧಿಕಾರಗಳನ್ನು ಹೊಂದಿದ್ದವು.

ಮೊಘಲರ ಕಾಲ:

ಭಾರತದಲ್ಲಿ ಮೊಘಲರಅವಧಿಆರಂಭವಾಗಿಜಮೀನ್ದಾರಿ ಪದ್ದತಿ, ರೈತವಾರಿ ಪದ್ಧತಿ, ಮಹಲ್ವಾರಿ ಪದ್ಧತಿಗಳು ಜಾರಿಗೆ ಬಂದು ಸ್ಥಳೀಯ ಆಡಳಿತ ವ್ಯವಸ್ಥೆಅವನತಿಯತ್ತ ಸಾಗಿದವು ಮೊಘಲ್ ಸಾಮ್ರಾಜ್ಯದಅವಧಿಯಲ್ಲಿ ಸ್ಥಳೀಯ ಆಡಳಿತಗಳಿಗೆ ಹೆಚ್ಚು ಒತ್ತು ನೀಡಲಾಗಲಿಲ್ಲ. ಸ್ಥಳೀಯ ಸಂಸ್ಥೆಗಳನ್ನು ಕೇವಲ ಆಂತರಿಕ ಭದ್ರತೆ, ಕಂದಾಯ ಸಂಗ್ರಹಣೆಯಂತಹ ಕಾರ್ಯಗಳಿಗೆ ನಿಯೋಜಿಸಲಾಗಿತ್ತು. ಸ್ಥಳೀಯವಾಗಿ

ಯಾವುದೇಅಧಿಕಾರವನ್ನು ನೀಡಿರಲಿಲ್ಲ. ಗ್ರಾಮಗಳಲ್ಲಿ ತೆರಿಗೆಯನ್ನು ಸಂಗ್ರಹಿಸುವಂತಹ ವ್ಯವಸ್ಥೆಜಾರಿಯಲ್ಲಿತ್ತು.

ಗಂಗರ ಕಾಲ:

ಗಂಗರಕಾಲದಆಡಳಿತ ವ್ಯವಸ್ಥೆಯ ಘಟಕಗಳು ಕ್ರಮವಾಗಿಗ್ರಾಮ, ಅಗ್ರಹಾರ(ವಿಶೇಷ ರೀತಿಯಗ್ರಾಮ), ನಾಡು(ತಾಲ್ಲೂಕ) ವಿಷಯ(ಜಿಲ್ಲೆಗಳ ಹಂತದ ಆಎಳಿತ ಘಟಕ), ನಗರ ಎಂಬ ಆಡಳಿತ ವ್ಯವಸ್ಥೆಜಾರಿಯಲ್ಲಿತ್ತು.

ಚೋಳರ ಕಾಲ :

ಚೋಳರ ಕಾಲದಲ್ಲಿ ಸ್ವಯಂ ಆಡಳಿತವು ಹೆಚ್ಚು ಜನಪ್ರಿಯವಾಗಿದ್ದು, ಕ್ರಿ.ಶ 10 ರಿಂದ ಕ್ರಿ.ಶ.14ರ ವರೆಗಿನಅವಧಿಯನ್ನು ಸ್ವಯಂ ಆಡಳಿತದ ಸುವರ್ಣಕಾಲ ಎನ್ನುತ್ತಾರೆ. ಗ್ರಾಮಗಳಲ್ಲಿ ಮುಖಂಡರುಗಳ ಮೂಲಕ ಕಂದಾಯವನ್ನುಗ್ರಾಮದಲ್ಲಿ ವಸೂಲಿ ಮಾಡಲಾಗುತ್ತಿತ್ತು.

ಬ್ರಿಟಿಷರಕಾಲದ ಸ್ಥಳೀಯ ಸರಕಾರಗಳು:

ಹಿಂದಿನ ಕಾಲದಲ್ಲಿ ಭಾರತದಲ್ಲಿ ಪಂಚರು ನಡೆಸುತ್ತಿದ್ದ ಕಾರ್ಯಗಳನ್ನು ಬ್ರಿಟಿಷರುತಮ್ಮ ಆಡಳಿತದ ಅವಧಿಯಲ್ಲಿ ಫೌಜದಾರ, ಪತವಾರಿ, ದರೋಗ ಎಂಬ ಅಧಿಕಾರಿಗಳಮೂಲಕ ನಿರ್ವಹಣೆ ಮಾಡುತ್ತಿದ್ದರು.ಬ್ರಿಟಿಷರು ನಂತರದಅವಧಿಯಲ್ಲಿ ಭಾರತದಲ್ಲಿ ನಿಯಂತ್ರಿತ ಸ್ಥಳೀಯ ಸಂಸ್ಥೆಗಳನ್ನು ಆರಂಭಿಸಿದ್ದರು. ಇದರ ಪ್ರಮುಖಉದ್ದೇಶವುಕಂದಾಯವನ್ನು ಸಂಗ್ರಹಣೆ ಮಾಡುವುದಾಗಿತ್ತು.1870ರಲ್ಲಿ ಲಾರ್ಡ್ ಮಯೋಸ್‌ಘೋಷಣೆ ಹೊರಡಿಸಿ ಆಡಳಿತವನ್ನು ವಿಕೇಂದ್ರಿಕರಿಸಿ, ಸ್ಥಳೀಯ ಮಟ್ಟದಲ್ಲಿ ಆಡಳಿತ ನಡೆಸಲುಅವಕಾಶವನ್ನು ಕಲ್ಪಿಸಿದ್ದರು. ಭಾರತದ ವೈಸರಾಯ್ ಲಾರ್ಡ್‌ರಿಪ್ಪನ್‌ರವರು 1882ಮೇ18ರಂದು ಸ್ಥಳೀಯ ಸರಕಾರಕ್ಕೆ ಸಂಬಂಧಿಸಿದಂತೆ ಘೋಷಣೆ ಹೊರಡಿಸಿದರು. ಈ ಘೋಷಣೆಯು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ಸ್ಥಾಪನೆಗೆ ಆಧಾರವಾಯಿತು. ಇದನ್ನು"ಸ್ಥಳೀಯ ಸರಕಾರಗಳ ಮ್ಯಾಗ್ನಕಾರ್ಡ ಎನ್ನುವರು.1882ರಲ್ಲಿ ರಿಪ್ಪನ್ ಸ್ಥಳೀಯ ಆಡಳಿತದ ವ್ಯವಸ್ಥೆಗೆತಂದ ಬದಲಾವಣೆಗಳು ಪಂಚಾಯತ್ ಆಡಳತ ಪರಿವರ್ತನೆಯಲ್ಲಿದಾಖಲಾದ ಪ್ರಮುಖ ಬದಲಾವಣೆಗಳಾಗಿವೆ. 1862ರಲ್ಲಿ ಜಾರಿಗೆತಂದ ಸ್ಥಳೀಯ ನಿಧಿ, 1862ರಿಂದ1903ರ ಕಾಲ ಘಟ್ಟವನ್ನುಆಧುನಿಕ ಸ್ವಯಂ ಆಡಳಿತ ವ್ಯವಸ್ಥೆಯಉತ್ತುಂಗ"ಎನ್ನುವರು. ಲಾರ್ಡ್‌ರಿಪ್ಪನ್ರವರನ್ನು ಸ್ಥಳೀಯ ಸಂಸ್ಥೆಗಳ ಪಿತಾಮಹಎನ್ನುವರು.

ಸ್ವತಂತ್ರ ನಂತರದ ದಿನಗಳಲ್ಲಿ ಭಾರತದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಜಾರಿಗೆತರಲು ಬ್ರಿಟಿಷ ಸರಕಾರಕ್ಕೆಒತ್ತಡತರಲು ಭಾರತೀಯರಾಷ್ಟ್ರೀಯಕಾಂಗ್ರೇಸ್ ಪಕ್ಷ ಹೋರಾಟ ಮಾಡಿತು.ಅದೇ ಸಂದರ್ಭದಲ್ಲಿಗಾಂಧೀಜಿಯವರುಗ್ರಾಮ ಸ್ವರಾಜ್ ಪರಿಕಲ್ಪನೆಯನ್ನು ಮಂಡಿಸಿದರು.ಗ್ರಾಮ ಸ್ವರಾಜ್ ಎಂದರೆ–ಗ್ರಾಮಗಳಿಗೆ ಅಧಿಕಾರವನ್ನು ವಿಕೇಂದ್ರಿಕರಿಸುವುದಾಗಿತ್ತು. ಹಳ್ಳಿಗಳು ಉದ್ಧಾರವಾಗಬೇಕಾದರೆ ಗ್ರಾಮಗಳಲ್ಲಿ ಆಡಳಿತವು ಲಭ್ಯವಾಗಬೇಕು.ಗ್ರಾಮ ಸ್ವರಾಜ್ ಮೂಲಕ ಸ್ವಯಂ ಆಡಳಿತವನ್ನು ನೀಡಬೇಕು.ಗ್ರಾಮ

ಸ್ವರಾಜ್‌ಕಲ್ಪನೆಯನ್ನುಜನರಲ್ಲಿ ಮೂಡಿಸಲು 1919ರಲ್ಲಿ ನವಜೀವನ್‌ಟ್ರಸ್ಟ್ ಸ್ಥಾಪಿಸಿ ಅನೇಕ ಲೇಖನಗಳನ್ನು ಗ್ರಾಮ ಸ್ವರಾಜ್‌ಗೆ ಸಂಬಂಧಿಸಿದಂತೆ ಪ್ರಕಟಿಸಿದರು.

1957ರಲ್ಲಿ ಬಲವಂತರಾಯ್ ಮೆಹತಾರವರಅಧ್ಯಕ್ಷತೆಯಲ್ಲಿಒಂದು ಸಮಿತಿಯನ್ನು ರಚಿಸಿತು.ಪಂಚಾಯತ್ ರಾಜ್‌ದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯವಿರಬೇಕೆಂದು ಮತ್ತು ವಿಕೇಂದ್ರಿಕೃತ ಆಡಳಿತ ವ್ಯವಸ್ಥೆಇರಬೇಕೆಂದು ಶಿಫಾರಸ್ಸು ಮಾಡಿತು. 1977 ರಲ್ಲಿ ಬಲವಂತರಾಯ್ ಮೆಹತಾ ಅವರಶಿಫಾರಸ್ಸಿನ ದೋಷ ತಿಳಿಯಲು ಅಶೋಕ ಮೆಹತ್ತಾ ಸಮಿತಿ ರಚಿಸಿತು. ಅದುವಿಕೇಂದ್ರಿಕೃತ ಆಡಳಿತ ವ್ಯವಸ್ಥೆಯನ್ನು ಪರುಣಾಮಕಾರಿಯಾಗಿಜಾರಿಗೆತರಲು ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಒಂದು ಮೂರರಷ್ಟು ಸ್ಥಾನ ಮೀಸಲಾತಿ ನೀಡಬೇಕೆಂದು ಶಿಫಾರಸ್ಸು ಮಾಡಿತು. ಈ ಎಲ್ಲಾ ಸಮಿತಿಯ ಶಿಫಾರಸ್ಸುಗಳನ್ನು ಪರಿಶೀಲಿಸಿ ಅದರಲ್ಲಿಇರುವ ದೋಷಗಳ ತಿದ್ದುಪಡಿಗೆಎಲ್. ಎಮ್. ಶಿಂಘ್ವಿ ಅವರಅಧ್ಯಕ್ಷತೆಯಲ್ಲಿ ಪ್ರಜಾಪ್ರಭುತ್ವ ಮತ್ತುಅಭಿವೃದ್ಧಿಗಾಗಿ ಪಂಚಾಯತ್‌ರಾಜ್ ಸಂಸ್ಥೆಗಳ ಪುನರಶ್ಚೇತನ ಎಂಬ ಸಮಿತಿಯನ್ನು ನೇಮಿಸಿತು. ಈ ಸಮಿತಿಯು ಹೆಚ್ಚು ಪಂಚಾಯಿತಿಗೆ ಪ್ರಾಮುಖ್ಯತೆ ನೀಡಲಾಯಿತು. 64ನೇ ತಿದ್ದುಪಡಿ ಮಸೂದೆಯು ಈ ಸಮಿತಿಯ ಶಿಫಾರಸ್ಸುಗಳಿಗೆ ಪ್ರತಿಕ್ರಿಯೆಯಾಗಿ ಪಂಚಾಯತ್‌ರಾಜ್ ಸಂಸ್ಥೆಗಳನ್ನು ಸಂವಿಧಾನ ಬದ್ಧಗೊಳಿಸುವುದರ ಮೂಲಕ ಅವುಗಳನ್ನು ಬಲಪಡಿಸಲುಜುಲೈ 1989 ರಲ್ಲಿ ಲೋಕಸಭೆಯಲ್ಲಿ ಈ ಮಸೂದೆಯನ್ನು ಮಂಡಿಸಲಾಯಿತು. ಆದರೆರಾಜ್ಯ ಸಭೆಯಲ್ಲಿಅನುಮೊದನೆ ಸಿಗಲಿಲ್ಲ,ಆದರೆ ಪಿ.ವಿ.ನರಸಿಂಹರಾವ್ ಸರಕಾರಅಧಿಕಾರಕ್ಕೆ ಬಂದಾಗ ಸದರಿ ಮಸೂದೆಯು 17 ರಾಜ್ಯ ವಿಧನ ಸಭೆಗಳ ಒಪ್ಪಿಗೆಅಲ್ಲದೆರಾಷ್ಟ್ರಾಧ್ಯಕ್ಷರಒಪ್ಪಿಗೆಯನ್ನುಪಡೆಯಿತು.ಇದನ್ನು 1992ರ ಕಾಯ್ದೆ ಮತ್ತು73ನೇ ಸಂವಿಧಾನತಿದ್ದುಪಡೆಕಾಯ್ದೆಎಂದುಕರೆಯುತ್ತಾರೆ.

ಅಧ್ಯಯನದ ಅಗತ್ಯತೆ ಮತ್ತು ಮಹತ್ವ :

ಭಾರತೀಯ ಸಮಾಜದಲ್ಲಿ ಹಿಂದುಳಿದಿರುವ ಮಹಿಳೆಯರಲ್ಲಿ ಹೆಚ್ಚಿನವರು ಭೂಮಿ, ಬಂಡವಾಳ,ಶಿಕ್ಷಣ,ಉದ್ಯೋಗ,ಅಧಿಕಾರ,ಸವಲತ್ತು,ರಕ್ಷಣೆ ಮೊದಲಾದ ಮೂಲಭೂತ ಸಬಲಿಕರಣದಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಸ್ವತಂತ್ರ್ಯ ನಂತರದಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿಕೇಂದ್ರ ಮತ್ತುರಾಜ್ಯ ಸರಕಾರಗಳು ಹಲವಾರು ಸಂವಿಧಾನಾತ್ಮಕ ರಕ್ಷಣೆಗಳು ಮತ್ತು ಅವಕಾಶಗಳಿಗನುಸಾರವಾಗಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿವೆ.ಆದರೆ ಮಹಿಳಾ ಸಮುದಾಯದ ಸಂಘಟನಾ ಶೀಲತೆ ಕೊರತೆ ಮತ್ತು ಆಳುವ ವರ್ಗದಇಚ್ಚಾಶಕ್ತಿಯಕೊರತೆಯಿಂದಾಗಿ ಮಹಿಳೆಯರ ಸಬಲೀಕರಣದ ಕನಸು ಇದುವರೆಗೂ ನನಸಾಗದೇಇರುವಂತಹ ಸಂಗತಿಯಾಗಿದೆ. ಆದ್ದರಿಂದ ಭಾರತೀಯ ಸರಕಾರವುಅಭಿವೃದ್ಧಿ ಕಾರ್ಯಕ್ರಮಗಳು ಮಹಿಳೆಯರು ಸಬಲೀಕರಣಕ್ಕೆ ಎಷ್ಟು ಪೂರಕವಾಗಿವೆಎಂದು ತಿಳಿಯಲು ಈ ಅಧ್ಯಯನವು ಮಹತ್ವದ್ದಾಗಿದೆ.**ಉದ್ದೇಶಗಳು:**

1. ನಿಜವಾಗಿಯೂಗ್ರಾಮೀಣ ಮಹಿಳೆಯರು ಸಬಲೀಕರಣ ಹೊಂದಿದರಾಅಂತ ತಿಳಿಯಲು.

2. ಗ್ರಾಮೀಣ ಮಹಿಳೆಯರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತುರಾಜಕೀಯ ಸ್ಥಿತಿಗತಿ ತಿಳಿಯಲು.
3. ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯ ತಿಳಿಯಲು.
4. ಗ್ರಾಮ ಪಂಚಾಯಿತಿಅಡಿಯಲ್ಲಿ ಬರುವ ಸಬಲೀಕರಣಕ್ಕಾಗಿಇರುವ ಸರಕಾರಿ ಯೋಜನೆಗಳ ಸಫಲತೆ ಮತ್ತು ವಿಫಲತೆ ತಿಳಿಯಲು.
5. ಗ್ರಾಮೀಣ ಪ್ರದೇಶದ ಮಹಿಳೆಯರು ಸಬಲೀಕರಣ ಹೊಂದಲುಇರುವ ತೊಡಕುಗಳನ್ನು ತಿಳಿಯಲು.

ಗ್ರಾಮ ಪಂಚಾಯಿತಿಯಲ್ಲಿಅಧಿಕಾರಕ್ಕೆ ಬರುವಂತಹ ಮಹಿಳೆಯರು ತಂದಂತ್ತಾ ಬದಲಾವಣೆಯನ್ನು ತಿಳಿಯುವುದು.

01. ಡಾ.ಎಚ್. ಎಮ್.ರಾಜಶೇಖರ್ಅವರ ಮಹಿಳೆ ಮತ್ತುರಾಜಕಾರಣ

ಎಂಬ ಪುಸ್ತಕದಲ್ಲಿ ಮಹಿಳೆಯರ ಸಾಮಾಜಿಕ ಮತ್ತುರಾಜಕೀಯ ಸ್ಥಾನಮಾನದ ಬಗ್ಗೆ ಪ್ರಾಚೀನ ಕಾಲದಿಂದಲೂಎರಡುರೀತಿಯ ಅಭಿಪ್ರಾಯಗಳು ವ್ಯಕ್ತವಾಗಿದೆ. ಸಾಂಪ್ರದಾಯಿಕ ಹಿಂದೂತ್ವ, ಜೂಡಾಯಿಸಂ ಮತ್ತುಇಸ್ಲಾಂಧರ್ಮದ ಪ್ರಕಾರ ಮಹಿಳೆಯರ ಮೇಲೆ ವಿದಿಸಿದ ನಿರ್ಬಂದಗಳು.

ಪ್ರಾಚೀನ್ಗ್ರೀಸ್ದೇಶದ ಮಹಾನ್ತತ್ವಜ್ಞಾನಿ ಪ್ಲೇಟೊ ಮಹಿಳೆಯರ ಸಮಾನತೆಯನ್ನುತನ್ನಗ್ರಂಥವಾದರಿಪಬ್ಲಿಕ್ ನಲ್ಲಿ ಪ್ರತಿಪಾದಿಸಿದರು ಮತ್ತುಆಧುನೀಕಕಾಲದ ಮಹಿಳೆಯರು ಸಮಾನತೆಗಾಗಿ ಮತ್ತುರಾಜಕೀಯ ಹಕ್ಕುಗಳಿಗಾಗಿ ನಡೆದಜಾಗತಿಕ ಹೋರಾಟ ಮಾಡಿದ 18ನೇ ಶತಮಾನದ ಮೇರಿಉಲ್ಫನ್ಕ್ರಾಫ್ಟ, ಬ್ರಿಟನಿನ್ನ ಮತ್ತಿಬ್ಬರು ಸಮಾನತೆಯ ಪ್ರತಿಪಾದಕರಾಗಿದ್ದ ಜೆ.ಎಸ್.ಮಿಲ್,1909ರಲ್ಲಿ ನ್ಯೂಯಾರ್ಕಿನ ಮ್ಯಾನ್ ಹ್ಯಾಟರುನ್ನಲ್ಲಿ ನಡೆದ ಮಹಿಳೆಯರ ರ್‍ಯಾಲಿಯಲ್ಲಿ ಸುಮಾರು 2000 ಮಹಿಳೆಯರು ಭಾಗವಹಿಸಿ ತಮ್ಮರಾಜಕೀಯ ಮತ್ತುಆರ್ಥಿಕ ಹಕ್ಕುಗಳನ್ನು ಸಮರ್ಥಿಸಿ, ಮಹಿಳಾಪರ ಹೋರಾಟದ ಬಗ್ಗೆ ತಿಳಿಯಲು ತುಂಬಾಉಪಯುಕ್ತವಾಗಿದೆ

ಭಾರತ ಹಾಗೂ ಇತರ ಅಭಿವೃದ್ಧಿಶೀಲ ದೇಶಗಳಲ್ಲಿ ಮಹಿಳೆಯರು ಸಾಮಾಜಿಕ,ಆರ್ಥಿಕ,ರಾಜಕೀಯ,ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅಸಮಾನತೆಗಳಿಗೆ ಒಳಗಾಗಿ ನಾನಾ ರೀತಿಯನೋವುಗಳನ್ನು ಅನುಭವಿಸುತ್ತಿದ್ದಾರೆ. ಮಹಿಳೆಯರು ಎಚ್ಚೆತ್ತು, ಒಗ್ಗಟ್ಟಾಗಿತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುವ ಕಾಲ ಪಕ್ವವಾಗಿದೆ.ಪುರುಷ ಪ್ರಧಾನ ಪದ್ದತಿಇರುವ ದೇಶಗಳಲ್ಲಿ ಮಹಿಳೆಯರು ಸಾಮಾಜಿಕ ಮತ್ತುಕೌಟುಂಬಿಕ ಸಂಕೋಲೆಗಳಿಗೆ ಒಳಗಾಗಿ 2ನೇ ದರ್ಜೆ ವ್ಯಕ್ತಿಗಳಂತೆ ವಾಸಿಸುತ್ತಿದ್ದಾರೆ. ಇವರ ಹಕ್ಕುಗಳ ಬಗ್ಗೆ ವಿಶ್ವ ಮಟ್ಟದಲ್ಲಿಆಂದೋಲನ ನಡೆಸಿದರೆ ಮಹಿಳೆಯರು ಸಬಲೀಕರಣ ಹೊಂದಲು ಸಾಧ್ಯವಾಗುತ್ತದೆಎಂದು ಈ ಗ್ರಂಥದಿಂದ ತಿಳಿಯಲು ಉಪಯುಕ್ತವಾಗಿದೆ.

ವಿಶ್ವದರಾಜಕಾರಣದಲ್ಲಿ ಮಹಿಳೆಯರ ಪಾತ್ರ ಮತ್ತು ಭಾರತದರಾಜಕಾರಣದಲ್ಲಿ ಮಹಿಳೆಯರ ಪಾತ್ರ ಮತ್ತುಕರ್ನಾಟಕದಲ್ಲಿ ಮಹಿಳೆಯರು ರಾಜಕೀಯ ಭಾಗವಹಿಸುವಿಕೆಯಕುರಿತು ತಿಳಿಯಲು ಈ ಗ್ರಂಥತುಂಬಾ ಮಹತ್ವದ ಪಾತ್ರ ವಹಿಸುತ್ತದೆ.**ಅಧ್ಯಯನದ ವೈಧಾನಿಕತೆ:**

ವಿಜಯಪುರಜಿಲ್ಲೆಯ ಸಿಂದಗಿ ತಾಲ್ಲೂಕಿನಗ್ರಾಮ ಪಂಚಾಯಿತಿಯ ಮೂಲಕ ಮಹಿಳಾಸಬಲೀಕರಣಕುರಿತು ಸಂಶೊಧನಾಕಾರ್ಯವನ್ನು ಕೈಗೊಳ್ಳಲು ಮತ್ತು ಮಾಹಿತಿ ಸಂಗ್ರಹಣೆ ಮಾಡಲು ಈ ಅಧ್ಯಯನಕ್ಕೆ ಸೂಕ್ತವಾದ ವೈಧಾನಿಕತೆಗಳನ್ನು ಅಳವಡಿಸಿಕೊಳ್ಳಲಾಗುವುದು.

ಅಧ್ಯಯನದ ವ್ಯಾಪ್ತಿ:

ಕರ್ನಾಟಕರಾಜ್ಯದ ವಿಜಯಪುರಜಿಲ್ಲೆಯಐದುತಾಲ್ಲೂಕಗಲನ್ನು ಹೊಂದಿದೆ.ವಿಜಯಪುರಜಿಲ್ಲೆಯಐದು ತಾಲ್ಲೂಕಗಳಲ್ಲಿ ಒಂದಾದ ಸಿಂದಗಿ ತಾಲ್ಲೂಕಿನಲ್ಲಿ ಬರುವಒಟ್ಟು 43 ಗ್ರಾಮ ಪಂಚಾಯಿತಿಗಳನ್ನು ಮಾತ್ರ ಪ್ರಸ್ತುತಅಧ್ಯಯನದಕ್ಷೇತ್ರವನ್ನಾಗಿಆಯ್ಕೆ ಮಾಡಿಕೊಳ್ಳಲಾಗುವುದು.

ಅಧ್ಯಯನದ ನಮೂನೆಯಆಯ್ಕೆ:

ಪ್ರಸ್ತುತಅಧ್ಯಯನಕ್ಕೆ ವಿಜಯಪುರಜಿಲ್ಲೆಯ ಸಿಂದಗಿ ತಾಲ್ಲೂಕಿನಲ್ಲಿ ಬರುವ 43 ಗ್ರಾಮ ಪಂಚಾಯಿತಿಗಳನ್ನು ಮಾತ್ರಆಯ್ದು,ಯೋಜನೆಗಳ ಫಲಾನುಭವಿಗಳನ್ನು, ಒಂದುಗ್ರಾಮ ಪಂಚಾಯಿತಿಯಿಂದ 10 ಜನ ಮಹಿಳೆಯರಂತೆ ಒಟ್ಟು 430ಜನ ಮಹಿಳೆಯರನ್ನು ಪ್ರಸ್ತುತ ಈ ಅಧ್ಯಯನಕ್ಕೆ ಆಯ್ದುಕೊಳ್ಳಲಾಗುವುದು.

ಮಾಹಿತಿ ಸಂಗ್ರಹಣೆಗೆಅನುಸರಿಸುವ ವಿಧಾನಗಳು:

ಪ್ರಸ್ತುತ ಲಿಂಗ ತಾರತಮ್ಯತೋರುತ್ತಿರುವ ಸಮಾಜದಲ್ಲಿಗ್ರಾಮೀಣ ಮಹಿಳೆಯರ ವಾಸ್ತವ ಸ್ಥಿತಿಗತಿಯನ್ನು ತಿಳಿಯಲು, ಅಧ್ಯಯನ ಮಾಡಲುಅನುಸರಿಸುವ ವಿಧಾನ ಎನಿಸಿಕೊಳ್ಳುತ್ತದೆ. ಪ್ರಸ್ತುತಅಧ್ಯಯನಕ್ಕೆ ಸ್ತ್ರೀವಾದಿ ಸಂಶೋಧನಾ ವಿಧಾನದ ಕೆಲವು ಸೂಕ್ತವಾದ ವಿಧಾನಗಳನ್ನು ಅಳವಡಿಸಿಕೊಳ್ಳಲಾಗುವುದು. ಅವುಗಳು ಈ ಕೆಳಗಿನಂತಿವೆ:

1. **ಸಂದರ್ಶನ ವಿಧಾನ:**

ಸಿಂದಗಿ ತಾಲ್ಲೂಕಿನಗ್ರಾಮೀಣ ಪ್ರದೇಶದ ಮಹಿಳೆಯರು ಹೆಚ್ಚಾಗಿ ಅನಕ್ಷರಸ್ಥರಾಗಿರುವುದರಿಂದ ಈ ಮಹಿಳೆಯರ ಸಾಮಾಜಿಕ,ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಸ್ಥಾನಮಾನಗಳ ಕುರಿತು ಅರ್ಥೈಸಿಕೊಳ್ಳಲು ಮತ್ತುಅವರಜೊತೆ ಸಂವಾದ ಮಾಡಲು ಸಂದರ್ಶನ ವಿಧಾನ ಪರಿಣಾಮಕಾರಿ ವಿಧಾನವಾಗಿದೆ. ಗ್ರಾಮೀಣ ಪ್ರದೇಶದ ಮಹಿಳೆಯರ ಸಬಲೀಕರಣಕ್ಕೆಇರುವ ತೊಡಕುಗಳನ್ನು ಗ್ರಹಿಸಲು ಅಥವಾ ತಿಳಿಯಲು ಈ ವಿಧಾನ ಅಳವಡಿಸಿಕೊಳ್ಳಲಾಗುವುದು.

2. **ಕ್ರಿಯಾತ್ಮಕ ಸಂಶೋಧನೆ:**

ಕ್ರಿಯಾತ್ಮಕ ಚಟುವಟಿಕೆಗಳನ್ನು ಕೈಗೊಂಡುಗ್ರಾಮೀಣ ಮಹಿಳೆಯರಿಗೆ ಸಾಕ್ಷರತೆ ಶಬಿರ, ಜಾಗೃತಿ ಶಿಬಿರ ಮುಂತಾದವುಗಳನ್ನು ಮಾಡಿ ಹಾಗೂ ಗ್ರಾಮೀಣ ಮಹಿಳೆಯರಿಗಾಗಿ ಪಂಚಾಯಿತಿಅಡಿಯಲ್ಲಿ ಬರುವ ಸರಕಾರಿ ಯೋಜನೆಗಳ ಬಗ್ಗೆ ಮಾಹಿತಿಯನ್ನು ನೀಡುವುದು, ಗ್ರಾಮೀಣ ಮಹಿಳೆಯರಿಗೆ ವಿಧವಾ ವೇತನ, ವೃದ್ಧಪ್ಯ ವೇತನ ಮತ್ತು ಸ್ವಸಹಾಯ ಗುಂಪುಗಳನ್ನು ಮಾಡಿಸಿ ಅದರ ಪ್ರಯೋಜನದ ಬಗ್ಗೆ ತಿಳಸುವುದು.

3.ಸಹಭಾಗಿತ್ವ ಅವಲೋಕನ ವಿಧಾನ:

ಗ್ರಾಮೀಣ ಪ್ರದೇಶದ ಮಹಿಳೆಯರು ಸಬಲೀಕರಣ ಹೊಂದಲು ಬೇಕಾದಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಬದುಕಿನಕುರಿತು ವಾಸ್ತವ ಚಿತ್ರಣವನ್ನುಅರಿಯಲು ಮತ್ತುಖಚಿತವಾದ ಮಾಹಿತಿಯನ್ನು ಪಡೆಯಲು ಸಹಭಾಗಿತ್ವ ಅವಲೋಕನ ವಿಧಾನ ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗುವುದು**4.ಪ್ರಕರಣ ಅಧ್ಯಯನ:**

ಪುರುಷ ಪ್ರಧಾನವಾದ ಸಮಾಜದಲ್ಲಿಗ್ರಾಮೀಣ ಮಹಿಳೆಯರಿಗೆ ಪಂಚಾಯಿತಿಯಲ್ಲಿಇರುವರಾಜಕೀಯ ಮೀಸಲಾತಿ ಮತ್ತುಅದರ ಲಿಂಗರಾಜಕಾರಣ, ಮಹಿಳೆಯರನ್ನು ಯೋಜನೆಗಳ ಫಲಾನುಭವಿಗಳನ್ನಾಗಿ ಮಾಡುವಲ್ಲಿರುವ ಮಿತ್ಯವನ್ನು, ಆರ್ಥಿಕ ಪರಿಸ್ಥಿತಿಯ ಬಗ್ಗೆ ಸಮಗ್ರ ವಿವರಣೆಯನ್ನು ಪಡೆಯಲು ಪ್ರಕರಣ ವಿಧಾನವನ್ನು ಬಳಸಿಕೊಳ್ಳಲಾಗುವುದು.

ಅಧ್ಯಯನದಇತಿಮಿತಿ:

1. ಈ ಅಧ್ಯಯನವು 43 ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಿದೆ.
2. ಪಂಚಾಯಿತಿಯಲ್ಲಿ ಬರುವ ಮೂರು ಹಂತಗಳಲ್ಲಿ ಒಂದಾದಗ್ರಾಮ ಪಂಚಾಯಿತಿಅಧ್ಯಯನಕ್ಕೆ ಸೀಮಿತವಾಗಿದೆ.
3. ಈ ಅಧ್ಯಯನವು ಸಿಂದಗಿ ತಾಲ್ಲೂಕಿನಗ್ರಾಮ ಪಂಚಾಯಿತಿಗಳಿಗೆ ಮಾತ್ರ ಸೀಮಿತಯಾಗಿದೆ.
4. ಈ ಅಧ್ಯಯನವು ಮಹಿಳಾ ಸಬಲೀಕರಣಕ್ಕೆ ಮಾತ್ರ ಸೀಮಿತವಾಗಿದೆ.
5. ಗ್ರಾಮಪಂಚಾಯಿತಿಯಲ್ಲಿ ಬರುವ ಯೋಜನೆಗಳ ಫಲಾನುಭವಿಗಳನ್ನು ಮತ್ತು ಪಂಚಾಯಿತಿಯ ಮಹಿಳಾ ಸದಸ್ಯರನ್ನು ಮಾತ್ರ ಈ ಅಧ್ಯಯನಕ್ಕೆ ಒಳಪಡಿಸಲಾಗಿದೆ.
6. ಮಹಿಳಾ ಸಬಲೀಕರಣದಲ್ಲಿಗ್ರಾಮ ಪಂಚಾಯಿತಿಯ ಪಾತ್ರವನ್ನು ಪ್ರಮುಖವಾಗಿಅಧ್ಯಯನಕ್ಕೆ ಒಳಪಡಿಸಲಾಗುವುದು.

ಉಪಸಂಹಾರ:

ಭಾರತದೇಶವು ಪುರುಷ ಪ್ರಧಾನವಾದ ಸಮಾಜ ವ್ಯವಸ್ಥೆಯನ್ನು ಹೊಂದಿದೆ. ಇಂತಹ ಸಮಾಜದಲ್ಲಿ ಮಹಿಳೆ ಮೂಲೆ ಗುಂಪಾಗಿದ್ದವಳು. ಇಂದುಗ್ರಾಮ ಪಂಚಾಯಿತಿಯ ಅಧ್ಯಕ್ಷಳಾಗಿ ಆಡಳಿತ ಕಾರ್ಯನಿರ್ವಹಿಸುವುದು ನೋಡಿದರೇತುಂಬಾ ಸಂತೋಷವೆನಿಸುತ್ತದೆ.ಜನ ಸಂಖ್ಯೆಯಅರ್ಧದಷ್ಟಿರುವಗ್ರಾಮೀಣ ಮಹಿಳೆಯರು ಸಬಲೀಕರಣ ಹೊಂದುವಲ್ಲಿತಂಬಾ ಹಿಂದೆವುಳಿದಿದ್ದಾರೆ. ಅನಕ್ಷರತೆ, ಬಡತನ, ಸೂಕ್ತವಾಗಿ

ಸೌಲಭ್ಯಗಳು ಲಭ್ಯವಾಗತ್ತಾಇಲ್ಲದಕಾರಣ ಸಬಲೀಕರಣದಲ್ಲಿ ಹಿಂದೆ ಉಳಿದಿದ್ದಾಳೆ .ಮಹಿಳೆಯರನ್ನು ಯೋಜನೆಯ ಫಲಾನುಭವಿಗಳಾಗಿ ನೋಡದೆಇದು ಪಾಲುದಾರಳಾಗಿ ನೋಡುವಂತಾಗಬೇಕು.ಗ್ರಾಮ ಪಂಚಾಯಿತಿಯು ಕೆಳಹಂತದಿಂದ ಮೇಲಿನ ಹಂತದ ವರೆಗಿನ ಸರಕಾರವಾಗಿರುವುದರಿಂದ ಮಹಿಳೆಯರ ಕೆಲಸಕ್ಕೆ ಸೂಕ್ತವಾದ, ಚಟುವಟಿಕೆಯುಕ್ತವಾದ ಸರಕಾರವ್ಯವಸ್ಥೆಯಾಗಿದೆ

ಆಕರ ಗ್ರಂಥಗಳು:

1. ಡಾ. ಕೆ. ಜೆ. ಸುರೇಶಅವರ ಪುಸ್ತಕವಾದಭಾರತ ಸರಕಾರ ಮತ್ತುರಾಜಕೀಯ ಪ್ರಕಾಶನ ಮಾನಸಗಂಗೋತ್ರಿ.
2. ಬಿ. ಸಿ.ಶೈಲಾ ನಾಗರಾಜ್‌ಅವರ ಪುಸ್ತಕವಾದಗ್ರಾಮೀಣ ಮಹಿಳಾ ಲೋಕ .
3. ಡಾ. ಬಿ.ವ್ಹಿ.ಶಿರೂರ ಅವರ ಪುಸ್ತಕವಾದಸಂಶೋಧನಾ ಸ್ವರೂಪ ಪ್ರಕಾಶನಅನ್ನಪೂರ್ಣ ಪ್ರಕಾಶನ ಹುಬ್ಬಳ್ಳಿ.
4. ಎಚ್.ಎಸ್.ಶ್ರೀಮತಿ ಅವರ ಪುಸ್ತಕವಾದ ಸ್ತ್ರೀವಾದಿ ಸಂಶೋಧನೆ ವಿದಿ_ವಿಧಾನಗಳು ಬರಹ ಪಬ್ಲಿಷಿಂಗ್ ಹೌಸ್ ಬೆಂಗಳೂರು.
5. ಪಿ.ಎಸ್.ಗಂಗಾಧರ. ಅವರ ಪುಸ್ತಕವಾದಭಾರತ ಸಂವಿಧಾನ ಮತ್ತುರಾಜಕೀಯ ಪ್ರಕಾಶನವೈತ್ರಾ ಪ್ರಕಾಶನ ಬೆಂಗಳೂರು, ಮುದ್ರಣ–2008.
6. ಪ್ರೋ.ಬಿ.ಸಿ.ಮಹೇಶ್ ಚಂದ್ರಗುರು , ಕು.ಶಾಂತಮ್ಮ ಮತ್ತು ಡಾ.ಶ್ರೀಕಂಠಯ್ಯ.ಅವರ ಪುಸ್ತಕವಾದ ಮಹಿಳಾ ಅಧ್ಯಯನದ ನೆಲೆಗಳು ಪ್ರಕಾಶನ ಶ್ರೀ ಶಿರಡಿಸಾಯಿ ಎಂಟರ್ ಪ್ರೈಸಸ್ #58/1.5 ನೇ ಮುಖ್ಯರಸ್ತೆ,ಗಾಡಿ ಮುದ್ದಣರಸ್ತೆ ಕಾಮಾಕ್ಷಿಪಾಳ್ಯ ಹೊಸ ಬಡಾವಣೆ,ಬೆಂಗಳೂರು–560079, ಮುದ್ರಣ–2010.
7. ಲೇಖಕರುಡಾ.ಎನ್.ಗಾಯತ್ರಿಅವರ ಪುಸ್ತಕವಾದಮಹಿಳಾ ಮೀಸಲಾತಿ ಮತ್ತು ಲಿಂಗ ರಾಜಕಾರಣ ಪುಸ್ತಕದ. ಲಡಾಯಿ ಪ್ರಕಾಶನಗದಗ–ಮುದ್ರಣ–2012.
8. ಲೇಖಕರು ಪ್ರೊ. ಸಿ.ವಿ.ಕಲ್ಬರ್ಗಿ ಅವರ ಪುಸ್ತಕವಾದಗ್ರಾಮೀಣ ಮಹಿಳಾ ಸಬಲೀಕರಣ. ಪ್ರಸಾರಾಂಗಗುಲ್ಬರ್ಗಾ ವಿಶ್ವವಿದ್ಯಾನಿಲಯ, ಗುಲ್ಬರ್ಗಾ–ಮುದ್ರಣ–2012.
9. ಲೇಖಕರುಹೇಮಲತಾ.ಎಚ್.ಎಮ್‌ಅವರ ಪುಸ್ತಕವಾದಮಹಿಳಾ ಸಶಕ್ತಿಕರಣ ಪುಸ್ತಕದ ಪ್ರಕಾಶನಅಭಿರುಚಿ ಪ್ರಕಾಶನ ಮೈಸೂರು, ಮುದ್ರಣ–2002.
10. "ಡಾ.ಕೆ.ಎಮ್.ಸುರೇಶ್‌ಅವರ ಪುಸ್ತಕವಾದಕರ್ನಾಟಕಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ–1993" ಪುಸ್ತಕದ ಲೇಖಕರು ಪ್ರಕಾಶನ ನಿಮ್ಮ ಸ್ಪರ್ಧಾ ವಿಜೇತ *629,7 ನೇ ಮೇನ್–ಗೈಗೋತ್ರಿ(1ನೇ ಮಹಡಿ) ವಿಜಯನಗರ ಬೆಂಗಳೂರು–560040.

ಸಂಶೋಧನಾ ವಿಧ್ಯಾರ್ಥಿನಿ **ಮಾರ್ಗದರ್ಶಕರು**

ಸಾವಿತ್ರಿ .ಎಸ್. ಕೊಪ್ಪಳ. **ಡಾ. ಲಕ್ಷ್ಮೀದೇವಿ. ವೈ**

ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ, ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ

ಸಂಶೋಧನೆ ಮತ್ತು ವಿಸ್ತರಣಾಕೇಂದ್ರಸಂಶೋಧನೆ ಮತ್ತು ವಿಸ್ತರಣಾಕೇಂದ್ರ

ಅಕ್ಕಮಾಹದೇವಿ ಮಹಿಳಾ ವಿಶ್ವವಿದ್ಯಾನಿಲಯ ಅಕ್ಕಮಾಹದೇವಿ ಮಹಿಳಾ ವಿಶ್ವವಿದ್ಯಾನಿಲಯ

ವಿಜಯಪುರ. ವಿಜಯಪುರ.